# 4 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ
# ಬೆಂಗಳೂರು

ಸಿಸಿ ನಂ. 4476/2018 ಚಾಸಾಃ 1 ಪ್ರಾಸಾ ಃ 1

ಸಾಕ್ಷಿದಾರರ ಹೆಸರು ಃ ಮಮತಾ ನಾಯ್ಡು
ಗಂಡನ ಹೆಸರು ಃ ಲೇಟ್ ನಾಗರಾಜು ನಾಯ್ಡು
ವಯಸ್ಸು ಃ 37 ವರ್ಷ
ಕೆಲಸ ಃ ಖಾಸಗಿ ಶಾಲೆಯಲ್ಲಿ ಕೆಲಸ
ವಾಸ ಃ ಚಿತ್ತೂರು

ಸಾಕ್ಷಿಗೆ ಕನ್ನಡ ಭಾಷೆಯು ಸ್ವಲ್ಪ ಬರುತ್ತಿದ್ದುದ ಮತ್ತು ಸಾಕ್ಷಿಯು ತಾನು ತೆಲುಗು ಭಾಷೆಯು ತನಗೆ ಸಂಪೂರ್ಣವಾಗಿ ಗೊತ್ತಿದ್ದು ಮತ್ತು ಅದೇ ಭಾಷೆಯಲ್ಲಿ ಸಾಕ್ಷಿ ನುಡಿಯುತ್ತೇನೆ ಎಂದು ಹೇಳಿದ್ದರಿಂದ ಶ್ರೀ ಆರ್.ಸಿ ವಕೀಲರಿಗೆ ತೆಲುಗು ಮತ್ತು ಕನ್ನಡ ಭಾಷೆಯು ಗೊತ್ತಿರುವುದರಿಂದ ಅವರನ್ನು ತರ್ಜುಮೆಗಾರರನ್ನಾಗಿ ಆರೋಪಿ ಪರ ವಕೀಲರ ಮತ್ತು ಅಭಿಯೋಜಕರ ಸಮ್ಮತಿಯ ಮೇರೆಗೆ ನೇಮಕ ಮಾಡಲಾಯಿತು.

ಶ್ರೀ ಆರ್. ಸಿ ವಕೀಲರಿಗೆ ಪ್ರಮಾಣ ವಚನ ಬೋದಿಸಲಾಯಿತು ಮತ್ತು ಶ್ರೀ ಆರ್. ಸಿ ವಕೀಲರ ಮೂಲಕ ಸಾಕ್ಷಿಗೆ ದಿಃ 21.11.2022 ರಂದು ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯವಿಚಾರಣೆ ಃ ಹಿ.ಸಾ.ಸ.ಅ ರವರಿಂದಃ

1. ನಾನು ಈ ಹಿಂದೆ ಬೆಂಗಳೂರಿನ ವಿಠಲ್ ನಗರದಲ್ಲಿ ವಾಸವಾಗಿದ್ದೆ. ಈ ಪ್ರಕರಣದಲ್ಲಿನ ನೀರಿಜಾಕ್ಷಿ ನಾಯ್ಡು, ಪಟ್ಟಾಭಿ ನಾಯ್ಡು, ವಿಜಯ ನಾಯ್ಡು ಮತ್ತು ಹರಿ ಪ್ರಸಾದ್ ನಾಯ್ಡು ರವರ ಪರಿಚಯ ನನಗೆ ಇದೆ. ಇದರಲ್ಲಿ ನೀರಜಾಕ್ಷಿ ನಾಯ್ಡು ರವರ ನನ್ನ ಗಂಡನ ಅಕ್ಕನಾಗಿರುತ್ತಾರೆ. ಪಟ್ಟಾಭಿನಾಯ್ಡು ರವರು ನೀರಜಾಕ್ಷಿ ನಾಯ್ಡು ರವರ ಗಂಡನಾಗಿರುತ್ತಾರೆ. ವಿಜಯ ನಾಯ್ಡು ಮತ್ತು ಹರಿಪ್ರಸಾದ್ ನಾಯ್ಡು ರವರು ನೀರಜಾಕ್ಷಿ ನಾಯ್ಡು ಮತ್ತು ಪಟ್ಟಾಭಿನಾಯ್ಡು ರವರ ಮಕ್ಕಳಾಗಿರುತ್ತಾರೆ.

2. ನನಗೆ ಶ್ರೀನಿವಾಸ (ಚಾಸಾ 2) ತಂದೆಯಾಗಬೇಕು, ಈಶ್ವರಿ (ಚಾಸಾ 3) ತಾಯಿ ಯಾಗಬೇಕು, ಮನೋಹರ (ಚಾಸಾ 4) ಅಣ್ಣ ನಾಗಬೇಕು. ನನಗೆ ಪುರುಷೋತ್ತಮ(ಚಾಸಾ 5) ಹಾಗೂ ಸಾಂಬಶಿವ ನಾಯ್ಡು ಗೊತ್ತು.

3. ಈ ಪ್ರಕರಣದಲ್ಲಿ ನನ್ನ ಗಂಡನಾದ ನಾಗರಾಜು ನಾಯ್ಡು ರವರು ರಿಚ್ ಮಂಡ್ ರಸ್ತೆಯಲ್ಲಿರುವ ಸ್ಟೇಟ್ ಬ್ಯಾಂಕ್ ಆಪ್ ಹೈದರಾಬಾದ್ ನಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ನನ್ನ ಗಂಡನಿಗೆ ದಿಃ 04-04-2008 ರಂದು ಹಾರ್ಟ್ ಆಟ್ಯಾಕ್ ಆಯಿತು ಮತ್ತು ಅದೇ ದಿನ ಅವರು ಮರಣ ಹೊಂದಿದರು. ನಂತರ ನಾನು ನನ್ನ ಗಂಡನ ಕಾರ್ಯ ಮಾಡಲು ನಮ್ಮ ಗಂಡನ ಊರಾದ ಬಿ.ಎನ್ ಕಂಡಿಕಾ ಗ್ರಾಮ, ಚಿತ್ತೂರು ತಾಲ್ಲೂಕು ಗೆ ಹೋದೆನು.

4. ನಂತರ ನಾನು ಕತ್ರಿಗುಪ್ಪೆ, ಬೆಂಗಳೂರಿನಲ್ಲಿ ಬಾಡಿಗೆ ಮನೆಯಲ್ಲಿ ಇದ್ದೆ. ನನ್ನ ಗಂಡನ ಅಕ್ಕನಾದ ನೀರಜಾಕ್ಷಿ ರವರು ನಮ್ಮ ಮನೆಯ ಎಲ್ಲಾ ಸಾಮಾನುಗಳನ್ನು ಮತ್ತು ಪ್ಲಾಟಿನ ದಾಖಲಾತಿಗಳನ್ನು, 13 ಸವರನ್ ಗ್ರಾಂ ನ 3 ಎಳೆ ಬಂಗಾರದ ಚೈನ್, ಚಕ್ ಬುಕ್, ಪಾಸ್ ಬುಕ್, ಹಿರೋ ಹೊಂಡಾ ಆಂಬಿಷನ್ ಬೈಕ್ ನಂ ಎಪಿ 03 ಕೆ ಟಿ ಆರ್ 7780 ಗಳನ್ನು ತೆಗೆದುಕೊಂಡು ಹೋದರು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4 ನೇ ಅ ಮು ಮ ದಂ ನ್ಯಾ